

# ತಮ್ಮ ಹೆಸರಿನ ಚಿತ್ರದಲ್ಲಿ ಶಿವಣ್ಣ ನಟನೆ

**ಶಿವರಾಜ್ ಕುಮಾರ್ ಅಭಿನಯದ ಹೊಸ ಚಿತ್ರಕ್ಕೆ ಹೆಸರು ಫಿಕ್ಸ್ ಆಗಿದೆ. ಶಿವರಾಜ್ ಕುಮಾರ್ ಅವರ ಪೆಟ್ ನೇಮ್ 'ಎಸ್ ಆರ್‌ಕೆ' ಅನ್ನು ಚಿತ್ರಕ್ಕೆ ಇಡಲಾಗಿದೆ.**

ಶಿವರಾಜ ಕುಮಾರ್ ಅಭಿನಯದ ಹೊಸ ಚಿತ್ರ ಸೆಟ್ಟೇರಿದೆ. ಮೊದಲ ಬಾರಿಗೆ ಅವರ ಸೋದರಳಿಯ ಲಕ್ಕಿ ಗೋಪಾಲ್ ಈ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಚಿತ್ರಕ್ಕೆ 'ಎಸ್‌ಆರ್‌ಕೆ' ಎಂದು ಹೆಸರಿಡಲಾಗಿದೆ. ಚಿತ್ರರಂಗದಲ್ಲಿ ಶಿವರಾಜ್ ಕುಮಾರ್ ರನ್ನು 'ಎಸ್‌ಆರ್‌ಕೆ' ಎಂದು ಶಾರ್ಟ್ ಆಗಿ ಕರೆಯುತ್ತಾರೆ. ಈಗ ಅವರ ಹೊಸ ಚಿತ್ರಕ್ಕೆ ಅದೇ ಹೆಸರನ್ನು ಆಯ್ಕೆ ಮಾಡಲಾಗಿದೆ.

ಶಿವಣ್ಣ ಅಭಿಮಾನಿಗಳು ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆಂದು ಗೊತ್ತಾಗಿದೆ. ಲಕ್ಕಿ ಗೋಪಾಲ್ ಹೇಳಿದ ಕತೆ ಇಷ್ಟವಾಯ್ತು. ಅಲ್ಲದೆ ಶಿವಣ್ಣ ಎಂದರೆ ನಮಗೆಲ್ಲಾ ಬಹಳ ಅಭಿಮಾನ. ಇದರಿಂದಾಗಿ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದೇವೆ ಎನ್ನುತ್ತಿದ್ದಾರೆ ಅಭಿಮಾನಿಗಳು.

'ಶಿವಣ್ಣ ಇಲ್ಲದಿದ್ದರೆ ನಾನು ವಿದ್ಯಾಭ್ಯಾಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇವತ್ತು ನಾನು ಏನಾಗಿದ್ದೇನೋ ಅದಕ್ಕೆ ಶಿವಣ್ಣ ಕಾರಣ' ಎಂದು ಲಕ್ಕಿ ಗೋಪಾಲ್ ಭಾವುಕರಾಗಿ ಮಾತನಾಡಿದ್ದಾರೆ. ■